# ‘ಸಂಸ್ಕೃತಿ, ಪರಂಪರೆ ಮಕ್ಕಳ ಭವಿಷ್ಯಗಳಾಗಲಿ’

■ **ವಿಕ ಸುದ್ದಿಲೋಕ** ಕಾರ್ಕಳ

ಕನ್ನಡ ಕೇವಲ ಭಾಷೆಯಲ್ಲ, ನಮ್ಮೊಳಗಿನ ಸಂಸ್ಕೃತಿ. ನಮ್ಮೆಲ್ಲರ ಮನೆ, ಊರಿನ ಹಬ್ಬ ಹರಿದಿನಗಳಲ್ಲಿ ಪರಂಪರೆಯಾಗಿ ಬೆಳೆದುಕೊಂಡು ಬಂದದ್ದು. ಭಾಷೆ, ಸಂಸ್ಕೃತಿ ಹಾಗೂ ಪರಂಪರೆಗಳು ನಮ್ಮ ಮಕ್ಕಳ ಭವಿಷ್ಯಗಳಾಗಬೇಕು ಎಂದು ನಿವೃತ್ತ ಮುಖ್ಯ ಶಿಕ್ಷಕ ಶ್ರೀರಂಗ ಜೋಷಿ ಹೇಳಿದ್ದಾರೆ.

ಅವರು ಎಂ.ಪಿ.ಎಂ. ಕಾಲೇಜಿನಲ್ಲಿ ಗುರುವಾರ ವಿದ್ಯಾರ್ಥಿ ವೇದಿಕೆ ಹಾಗೂ ಸಾಹಿತ್ಯ ಸಂಘದ ಆಶ್ರಯದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ, ಮಾತನಾಡಿದರು.

ಶಿಕ್ಷಣ ವ್ಯವಸ್ಥೆ, ಆಂಗ್ಲ ಶಿಕ್ಷಣ ವ್ಯವಸ್ಥೆ ಕಡೆಗಿನ ಒಲವು, ಇಂದು ನಮ್ಮ ಪೋಷಕರನ್ನು ಬದಲಾಯಿಸುತ್ತಿದೆ. ಕನ್ನಡ ಮಾಧ್ಯಮದಲ್ಲಿ ಕಲಿತ ಮಕ್ಕಳು ಮುಂದೆ ಕ್ರಿಯಾತ್ಮಕವಾಗಿ ತಮ್ಮನ್ನು ಎಲ್ಲ ಕಡೆಗಳಲ್ಲಿ ಸ್ಫೂರ್ತಿಯಿಂದ, ಸ್ವಯಂ ಪ್ರೇರಣೆಯಿಂದ ತೊಡಗಿಸಿಕೊಳ್ಳುತ್ತಾರೆ. ಇಂತಹ ಸಂಸ್ಕೃತಿ ಆಂಗ್ಲ ಮಾಧ್ಯಮದಲ್ಲಿ ಕಲಿತ ವಿದ್ಯಾರ್ಥಿಗಳಲ್ಲಿ ಕಾಣುವುದಿಲ್ಲ, ಇದು ನಮ್ಮ ನಿಮ್ಮೆಲ್ಲರ ಇಂದಿನ ಸಮಾಜ. ಒಟ್ಟು ವ್ಯವಸ್ಥೆಗಳ ಮಧ್ಯ ನಾವು ನಮ್ಮ ಮಕ್ಕಳನ್ನು ವೃತ್ತಿ ಪೂರಕವಾಗಿ ಬೆಳೆಸುತ್ತಿದ್ದೇವೆ. ಕನ್ನಡ ಪರಂಪರೆಯನ್ನು ಮುಂದುವರಿಸುವ ಕೆಲಸ ನಡೆಯಬೇಕು ಎಂದರು.




**ಎಂಪಿಎಂ ಕಾಲೇಜಿನಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯ ಶಿಕ್ಷಕ ಶ್ರೀರಂಗ ಜೋಷಿ ಮಾತನಾಡಿದರು.**

ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಸಾಹಿತಿ ಡಾ.ವರದರಾಜ ಚಂದ್ರಗಿರಿ ಮಾತನಾಡಿ, ನಮ್ಮ ಪಾರಂಪರಿಕ ಪದಗಳೊಂದಿಗೆ ಇಡೀ ಸಂಸ್ಕೃತಿ ಬೆರತುಕೊಂಡಿದೆ. ಅದನ್ನು ಮುಂದುವರೆದುಕೊಂಡು ಹೋಗಬೇಕು. ಆಂಗ್ಲಭಾಷೆ ಬಿಟ್ಟು ಬದುಕಲು ಇಂದಿನ ತಾಂತ್ರಿಕ ಯುಗದಲ್ಲಿ ಅಸಾಧ್ಯ. ಆದರ ಜತೆ ನಾವು ನಮ್ಮ ಭಾಷೆಯನ್ನು ಬಳಸುತ್ತಾ ಬೆಳೆಸಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಪ್ರಿನ್ಸಿಪಾಲ್ ಪ್ರೊ.ಶ್ರೀವರ್ಮ ಅಜ್ರಿ ಮಾತನಾಡಿ, ತಮ್ಮ ಕನ್ನಡ ಭಾಷೆಯೊಂದಿಗಿನ ಪ್ರೀತಿಯನ್ನು ಜಿ.ಪಿ.ರಾಜರತ್ನಂ ಅವರ ಹೆಂಡ, ಎಡ್ತಿ, ಕನ್ನಡ ಪದಗೋಳ್ ಅಂದ್ರೆ ರತ್ನನ ಪ್ರಾಣ ಪದ್ಯ, ಅರ್ಥೈಸಿ ವಿದ್ಯಾರ್ಥಿಗಳಿಗೆ ಕನ್ನಡ ಅಭಿಮಾನ ಬೆಳೆಸಿಕೊಳ್ಳಬೇಕು ಎಂದರು.

ಉಪನ್ಯಾಸಕರಾದ ಯೋಗೇಶ್ ಡಿ.ಎಚ್, ವಿದ್ಯಾಧರ ಹೆಗಡೆ, ಮಂಜುನಾಥ, ಜ್ಯೋತಿ ಎಲ್. ಜನ್ನೆ, ಗಣೇಶ್, ನವೀನ್ ದಿವ್ಯ ಪ್ರಭು ಹಾಗೂ ಅತಿಥಿ ಉಪನ್ಯಾಸಕರು ಉಪಸ್ಥಿತರಿದ್ದರು.

ಡಾ.ವರದರಾಜ್ ಚಂದ್ರಗಿರಿ ಸ್ವಾಗತಿಸಿದರು. ವಿದ್ಯಾರ್ಥಿನಿ ಅಕ್ಷತಾ ಕಾರ್ಯಕ್ರಮ ನಿರೂಪಿಸಿದರು. ಸುಷ್ಮಾ ಡಿಸೋಕ ವಂದಿಸಿದರು.

# ರಸ್ತೆ ಕಾಮಗಾರಿ: ತಾತ್ಕಾಲಿಕ ಮಾರ್ಗ ಬದಲಾವಣೆ

■ **ವಿಕ ಸುದ್ದಿಲೋಕ** ಉಡುಪಿ

ಉಡುಪಿ ನಗರಸಭೆಯ ವ್ಯಾಪ್ತಿಯಲ್ಲಿ ಕೈಗೊಂಡಿರುವ ರಸ್ತೆಯ ಕಾಮಗಾರಿ ಹಿನ್ನೆಲೆಯಲ್ಲಿ ನ.2ರಿಂದ 15 ದಿನಗಳ ವರೆಗೆ ಕೆ.ಎಂ. ಮಾರ್ಗದ ಶಿರಿಬೀಡು ಹಾಗೂ ಉಡುಪಿ ಕಿದಿಯೂರು ಹೋಟೆಲ್ ಎದುರಿನ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ತಾತ್ಕಾಲಿಕವಾಗಿ ಮಾರ್ಗ ಬದಲಾವಣೆಯನ್ನು ಮಾಡಲಾಗಿದೆ.

ಸರ್ವಿಸ್ ಬಸ್ ನಿಲ್ದಾಣದಿಂದ ಶಿರಿಬೀಡಿನ ಕಡೆಗೆ ತೆರಳುವ ಎಲ್ಲ ವಾಹನಗಳು ಕಿದಿಯೂರು ಹೋಟೆಲ್ ಎದುರುಗಡೆ ಇರುವ ರಸ್ತೆಯ ಮೂಲಕ ತೆರಳಿ ಐರೋಡಿಕಾರ್ ಜಂಕ್ಷನ್‌ನ ಮೂಲಕ ಸಿಟಿ ಬಸ್ ನಿಲ್ದಾಣ ತಲುಪಿ ಕಾರ್ಕಳ ಹಾಗೂ ಕುಂದಾಪುರ ಮಾರ್ಗದ ಕಡೆಗೆ ತೆರಳಬೇಕು. ಈ ಬಗ್ಗೆ ಸಾರ್ವಜನಿಕರು ಸಹಕರಿಸುವಂತೆ ಪೌರಾಯುಕ್ತರಾದ ಆನಂದ್ ಚಿ. ಕಲ್ಲೋಳಿಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.